# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಚಂದ್ರಗೌಡ ಸಿದ್ಧನಗೌಡ ಪಾಟೀಲ್, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹಾವೇರಿ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಉಪ ಲೋಕಾಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ:-** ಉಪ ನಿಬಂಧಕರು ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ. ಕಂಪ್ಲೆಂಟ್/ ಉಪಲೋಕ್ / ಬಿಜಿಎಂ-325/2011 /ಡಿಆರ್ಇ-1, ದಿನಾಂಕ: 30-01-2012.

-----

## ಪ್ರಸ್ತಾವನೆ

ಶ್ರೀ ಚಂದ್ರಗೌಡ ಸಿದ್ಧನಗೌಡ ಪಾಟೀಲ್, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹಾವೇರಿ ಇವರು ಅಕ್ರಮ ಸಂಭಾವನೆ ಬಯಸಿದ್ದಾರೆಂಬ ಆರೋಪಗಳ ಮೇರೆಗೆ ಲೋಕಾಯುಕ್ತ ಕಾಯ್ದೆ ಕಲಂ 12 (3)ರ ಮೂಲ ವರದಿಯನ್ನು ಸಂಬಂಧಿಸಿದ ದಾಖಲಾತಿಗಳೊಂದಿಗೆ ಕಳುಹಿಸಿ ಅದರ ಶಿಫಾರಸ್ಸಿನನ್ವಯ ಸಕ್ಷಮ ಪ್ರಾಧಿಕಾರವು ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಕ್ರಮದ ಬಗ್ಗೆ 3 ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12 (4)ರ ಪ್ರಕಾರ ವರದಿ ಮಾಡಬೇಕೆಂದು ಮೇಲೆ ಓದಲಾದ ದಿನಾಂಕ. 30-01-2012ರ ಪತ್ರದಲ್ಲಿ ಉಪ ನಿಬಂಧಕರು ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ಇವರು ತಿಳಿಸಿರುತ್ತಾರೆ.

ಶ್ರೀ ಚಂದ್ರಗೌಡ ಸಿದ್ಧನಗೌಡ ಪಾಟೀಲ್ ಇವರು ಕಿರಿಯ ಇಂಜಿನಿಯರ್ ಆಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹಾವೇರಿ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ದಿನಾಂಕ. 16-12-2010ರಂದು ಫಿರ್ಯಾದುದಾರರಾದ ಶ್ರೀ ಶಿವಪ್ಪ ನೀಲಪ್ಪ ಹೊಟ್ಟೆಪ್ಪನವರ, ಹಾವೇರಿ ಇವರ ಲಿಖಿತ ಫಿರ್ಯಾದಿನ ಮೇರೆಗೆ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಗಟಾರ ಕೆಲಸವನ್ನು ಮಾಡಿದ್ದು, ಅದರ ಬಿಲ್ ಮಾಡಿಸುವ ಸಲುವಾಗಿ ಆರೋಪಿತ ಅಧಿಕಾರಿಯಾದ ಶ್ರೀ ಚಂದ್ರಗೌಡ ಸಿದ್ಧನಗೌಡ ಪಾಟೀಲ್, ಕಿರಿಯ ಇಂಜಿನಿಯರ್ ರವರು ಫಿರ್ಯಾದುದಾರರಾದ ಶ್ರೀ ಶಿವಪ್ಪ ನೀಲಪ್ಪ ಹೊಟ್ಟೆಪ್ಪನವರ, ಹಾವೇರಿ ರವರಿಂದ ರೂ. 22,000-00ಗಳ ಅಕ್ರಮ ಸಂಭಾವನೆಯನ್ನು ಬಯಸಿದ್ದಾರೆಂಬ ದೂರಿನ ಮೇರೆಗೆ ಆರೋಪಿತ ನೌಕರರ ವಿರುದ್ಧ ಗುನ್ನೆ ಸಂಖ್ಯೆ. 4/2010ರಲ್ಲಿ ದಿನಾಂಕ. 16-12-2010ರಲ್ಲಿ ಕರ್ನಾಟಕ ಲೋಕಾಯುಕ್ತ ಪೋಲೀಸ್‌ಠಾಣೆ, ಹಾವೇರಿ ಪೋಲೀಸ್ ವಿಭಾಗದವರು ಮೊಕದ್ದಮೆಯನ್ನು ದಾಖಲಿಸಿ, ತನಿಖಾಧಿಕಾರಿಯ ಅಂತಿಮ ವರದಿಯ ನಕಲು ಮತ್ತು ತನಿಖಾ ದಾಖಲಾತಿಗಳನ್ನು ಮಾನ್ಯ ಆರಕ್ಷಕ ಮಹಾನಿರೀಕ್ಷಕರು, ಪೋಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರಿಗೆ ಕಳುಹಿಸುತ್ತಾ, ಆಪಾದಿತರು ಅಕ್ರಮ ಸಂಭಾವನೆಯನ್ನು ಪಡೆದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಅವರುಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸುವಂತೆ ಕೋರಿದ್ದಾರೆ.

-----2

ಉಪ ನಿಬಂಧಕರು ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ಇವರ ಶಿಫಾರಸ್ಸಿನಂತೆ ಶ್ರೀ ಚಂದ್ರಗೌಡ ಸಿದ್ಧನಗೌಡ ಪಾಟೀಲ್, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹಾವೇರಿ ಇವರ ವಿರುದ್ಧ ಶಿಸ್ತು ಕ್ರಮ ಪ್ರಾರಂಭಿಸಲು ಹಾಗೂ ಅದಕ್ಕಾಗಿ ವಿವರವಾದ ಇಲಾಖಾ ವಿಚಾರಣೆ ಕೈಗೊಳ್ಳಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14 (ಎ) ರಡಿಯಲ್ಲಿ ಪ್ರಕರಣವನ್ನು ಕರ್ನಾಟಕ ಉಪ ಲೋಕಾಯುಕ್ತಕ್ಕೆ ವಹಿಸಲು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

<u>ಆದೇಶ ಸಂಖ್ಯೆ ಗ್ರಾಅಪ 6 ಇಎನ್‌ಕ್ಯೂ 2012, ಬೆಂಗಳೂರು, ದಿನಾಂಕ. 23-2-2012</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಚಂದ್ರಗೌಡ ಸಿದ್ಧನಗೌಡ ಪಾಟೀಲ್, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹಾವೇರಿ ಇವರ ವಿರುದ್ಧ ಶಿಸ್ತು ಕ್ರಮ ಪ್ರಾರಂಭಿಸಿ ಇಲಾಖಾ ವಿಚಾರಣೆ ನಡೆಸಲು ಈ ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14(ಎ) ರನ್ವಯ ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

23/2/2012
(ಎನ್.ವೈ.ಸಾಗರ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರಭಾರ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ
ಸಂಕಲನಕಾರರು,ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.

ಪ್ರತಿ;
1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಉಪ ಲೋಕಾಯುಕ ಕಚೇರಿ, ಬೆಂಗಳೂರು.
3. ಉಪ ನಿಬಂಧಕರು ವಿಚಾರಣೆಗಳು-1 ,ಕರ್ನಾಟಕ ಉಪ ಲೋಕಾಯುಕ್ತ ಕಚೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಕರ್ನಾಟಕ ಉಪ ಲೋಕಾಯುಕ್ತ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ / ಜಲಸಂಪನ್ಮೂಲ ಇಲಾಖೆ.
6. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
7. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು.
8. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ.
9. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
10. ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಸೇವೆಗಳು - ಸಿ).
11. ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾವೇರಿ.
12. ಶ್ರೀ ಚಂದ್ರಗೌಡ ಸಿದ್ಧನಗೌಡ ಪಾಟೀಲ್, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹಾವೇರಿ
13. ಗ್ರಾ.ಅ.ರಾಜ್ ಇಲಾಖೆಯ ಕಾರ್ಯದರ್ಶಿ (ಪಂ.ರಾಜ್) / ಉಪ ಕಾರ್ಯದರ್ಶಿ(ಆಡಳಿತ) ಇವರ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು.
14. ಹೆಚ್ಚುವರಿ ಪ್ರತಿ : ರಕ್ಷಾ ಕಡತ : ಸೂಚನಾ ಫಲಕ : ಕಂಪ್ಯೂಟರ್ ಸೆಲ್.